ಓ.ಎಸ್.ನಂ.88/2020
ಪಿ.ಡಬ್ಲ್ಯೂ-1

ದಿನಾಂಕಃ 03-09-2024 ರಂದು ಪಿ.ಡಬ್ಲ್ಯೂ-1 ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: 1 ನೇ ಪ್ರತಿವಾದಿ ಪರ ವಕೀಲರಿಂದ:**

( 1 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು ಹಾಜರ ಇರುವುದಿಲ್ಲ. ಪ್ರಸ್ತುತ ದಾವೆಯನ್ನು ನಿಗದಿತ 1 ವರ್ಷದ ಒಳಗಾಗಿ ವಿಲೆ ಮಾಡುವಂತೆ ಡಬ್ಲ್ಯೂ.ಪಿ ನಂ.103886/2022 (ಜಿ.ಎಮ್-ಸಿಪಿಸಿ) ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠ ರವರ ನಿರ್ದೇಶನವಿದ್ದು, ಪಾಟೀ ಸವಾಲನ್ನು ಮುಂದೂಡಲು ಯಾವುದೇ ಸಕಾರಣಗಳು ಇರದೇ ಇರುವುದರಿಂದ ಸದರಿ ಪ್ರತಿವಾದಿ ಪರ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು)

**ಪಾಟೀ ಸವಾಲು: 2 ನೇ ಪ್ರತಿವಾದಿ ಪರ ಶ್ರೀ.ಎಸ್.ಬಿ.ಎಚ್ ವಕೀಲರಿಂದ:**

( 2 ನೇ ಪ್ರತಿವಾದಿ ಪರ ವಕೀಲರು ಪ್ರಸ್ತುತ ದಾವೆಯನ್ನು ವರ್ಗಾವಣೆ ಮಾಡಲು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟೆ ಇವರಿಗೆ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ವಿಲೇವಾರಿಯಾಗುವರೆಗೂ ಪ್ರಸ್ತುತ ದಾವೆಯನ್ನು ಮುಂದುವರೆಸದಂತೆ ಮನವಿ ಮಾಡುತ್ತಾರೆ. ಈ ದಿನ ಹಾಜರ ಪಡಿಸಿರುವ ಕೇಸ ಸ್ಟೆಟಸ್ ಪ್ರಿಂಟಔಟ ಪ್ರತಿ ಪರಿಶೀಲಿಸಲಾಗಿ ಯಾವುದೇ ತಡೆ ಆಜ್ಞೆ ಇರುವುದು ಕಂಡು ಬರುವುದಿಲ್ಲ. ಪ್ರಸ್ತುತ ದಾವೆಯನ್ನು ನಿಗದಿತ 1 ವರ್ಷದ ಒಳಗಾಗಿ ವಿಲೆ ಮಾಡುವಂತೆ ಡಬ್ಲ್ಯೂ.ಪಿ ನಂ.103886/2022 (ಜಿ.ಎಮ್-ಸಿಪಿಸಿ) ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠ ರವರ ನಿರ್ದೇಶನವಿದ್ದು, ವಕೀಲರು ನೀಡಿರುವ ಕಾರಣದ ಮೇಲೆ ಪಾಟೀ ಸವಾಲನ್ನು ಮುಂದೂಡಲು ಆಗುವುದಿಲ್ಲ. ಆದ್ದರಿಂದ ಸದರಿ ಪ್ರತಿವಾದಿ ಪರ ಸಾಕ್ಷಿ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು)

**ಪಾಟೀ ಸವಾಲು: 3 ನೇ ಪ್ರತಿವಾದಿ ಪರ ಶ್ರೀ.ಎಸ್.ವಿ.ಆರ್ ವಕೀಲರಿಂದ:**

( 3 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು ಹಾಜರ ಇರುವುದಿಲ್ಲ. ಪ್ರಸ್ತುತ ದಾವೆಯನ್ನು ನಿಗದಿತ 1 ವರ್ಷದ ಒಳಗಾಗಿ ವಿಲೆ ಮಾಡುವಂತೆ ಡಬ್ಲ್ಯೂ.ಪಿ ನಂ.103886/2022 (ಜಿ.ಎಮ್-ಸಿಪಿಸಿ) ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠ ರವರ ನಿರ್ದೇಶನವಿದ್ದು, ಪಾಟೀ ಸವಾಲನ್ನು ಮುಂದೂಡಲು ಯಾವುದೇ ಸಕಾರಣಗಳು ಇರದೇ ಇರುವುದರಿಂದ ಸದರಿ ಪ್ರತಿವಾದಿ ಪರ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು)

**ಪಾಟೀ ಸವಾಲು: 4 ನೇ ಪ್ರತಿವಾದಿ ಪರ ಶ್ರೀ.ಪಿ.ಪಿ.ಎನ್ ಪರ ಕು.ಎಸ್.ಕೆ.ಎಸ್ ವಕೀಲರಿಂದ:**

1. ನನ್ನ ತಂದೆಯ ಹೆಸರು ಚೆನ್ನಯ್ಯಾ ಇರುತ್ತದೆ. ಸದರಿ ಚನ್ನಯ್ಯಾರವರಿಗೆ ಒಟ್ಟು ನಾಲ್ಕು ಜನ ಮಕ್ಕಳು ಇರುತ್ತಾರೆ. 4 ನೇ ಪ್ರತಿವಾದಿ ನನ್ನ ಮಗ ಇರುತ್ತಾನೆ. 4 ನೇ ಪ್ರತಿವಾದಿಯು ನನ್ನ ತಂದೆಯ ಮರಣಾ ನಂತರ ಕಿರಣಾ ಅಂಗಡಿಯನ್ನು ನಡೆಸಿಕೊಂಡು ಹೋಗುತ್ತಿದ್ದಾನೆ. ಸದರಿ ಕಿರಾಣಾ ಅಂಗಡಿ ಲೈಸನ್ಸ 4 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ. ಸದರಿ ಕಿರಾಣಾ ಅಂಗಡಿ ಚನ್ನಯ್ಯಾರವರಿಗೆ ಸಂಬಂಧ ಇರುವುದಿಲ್ಲ ಕೇವಲ 4 ನೇ ಪ್ರತಿವಾದಿಗೆ ಮಾತ್ರ ಸಂಬಂಧ ಇರುತ್ತದೆ ಎಂದರೆ ಸರಿ. 4 ನೇ ಪ್ರತಿವಾದಿ ಪ್ರಸ್ತುತ ದಾವೆಗೆ ಸಂಬಂಧ ಇರದೇ ಇದ್ದರೂ ನಾನು ಆತನನ್ನು ಪಕ್ಷಗಾರನ್ನಾಗಿ ಮಾಡಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ